ಅಸಲು ದಾವಾಃ- 128/2020 ಪಿ.ಡಬ್ಲ್ಯೂಃ-01

ದಿನಾಂಕಃ 04.08.2025 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ. ಎನ್. ಇ. ಸಿ ವಕೀಲರಿಂದ

ಪ್ರತಿವಾದಿಯು ದಾವಾ ಸ್ವತ್ತಿನ ಯಾವ ದಿಕ್ಕಿನ ಆಸ್ತಿಯನ್ನು ಒತ್ತುವರಿ ಮಾಡಿದ್ದಾರೆ ಹಾಗೂ ಅದರ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ದಾವಾ ಸ್ವತ್ತಿನ ದಕ್ಷಿಣ ದಿಕ್ಕಿನಲ್ಲಿ ಹಾಗೂ ಅವುಗಳ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ಅಳತೆ ಮಾಡಿಕೊಡು ಎಂದು ಯಾವ ವರ್ಷದಲ್ಲಿ ಅರ್ಜಿ ಹಾಕಿದ್ದೇನೆ ಎಂದರೆ 2020 ರಲ್ಲಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಅರ್ಜಿ ಕೊಟ್ಟ ಎಷ್ಟು ವರ್ಷದ ನಂತರ ದಾವಾ ಸ್ವತ್ತನ್ನು ಅಳತೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು 2020 ರಲ್ಲಿ ಅಳತೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ತಹಶೀಲ್ದಾರ್ ಕಚೇರಿಯಿಂದ ಅಳತೆ ಮಾಡಲು ನೀಡಿದ ನೋಟೀಸ್ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಗೊತ್ತಿಲ್ಲ. 2020 ರ ಮುಂಚೆಯು ಒಮ್ಮೆ ದಾವಾ ಸ್ವತ್ತನ್ನು ಅಳತೆ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. 2020 ರ ಹಿಂದೆಯೇ ನಾನು ಅಳತೆ ಮಾಡಿಸಿದ್ದಾಗ ಪ್ರತಿವಾದಿಯು ನನಗೆ ಸೇರಿದ ಆಸ್ತಿಯನ್ನು ಬಿಟ್ಟುಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ನಮ್ಮ ಮತ್ತು ಪ್ರತಿವಾದಿಯ ಜಮೀನಿನ ಮಧ್ಯೆದಲ್ಲಿ ಒಂದು ಮಾರು ಅಗಲದ ಬದು ಇದೆ ಎಂದರೆ ಸಾಕ್ಷಿಯು 3 ಅಡಿ ಅಗಲದ ಬದು ಇದೆ ಎಂದು ನುಡಿಯುತ್ತಾರೆ. ಸದರಿ ಬದು 15 ಅಡಿ ಅಗಲ ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ಮತ್ತು ಪ್ರತಿವಾದಿಯ ಜಮೀನಿನ ಮಧ್ಯೆ ತಲಾತಲಾಂತರಗಳಿಂದ ಸುಮಾರು 15 ಅಡಿಯ ಬದು ಇದ್ದು ಅದರಲ್ಲಿ ನಾವು ಮತ್ತು ಪ್ರತಿವಾದಿ ದನಗಳನ್ನು ಮೇಯಿಸಿಕೊಳ್ಳುತ್ತಿದ್ದೇವು ಎಂದರೆ ಸಾಕ್ಷಿಯು ಸದರಿ ಜಾಗವು ನನಗೆ ಸೇರಿದ ಖರಾಬು ಜಾಗ ಅದರಲ್ಲಿ ಪ್ರತಿವಾದಿಯು ದನ ಮೇಯಿಸಿಕೊಳ್ಳುತ್ತಿದ್ದಾರೆ ಎಂದು ನುಡಿಯುತ್ತಾರೆ.

ನಮ್ಮ ಮತ್ತು ಪ್ರತಿವಾದಿಯ ಜಮೀನಿನ ನಡುವೆ ನಮಗೆ ಸೇರಿದ ಖರಾಬು ಇದೆ ಎಂಬುದರ ಬಗ್ಗೆ ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿದ್ದೀರಾ ಎಂದರೆ

ಇಲ್ಲ. ಸರ್ವೆ ಸ್ಕೆಚ್ ನಲ್ಲಿ ನಮಗೆ ಸೇರಿದ ಖರಾಬು ಇರುವ ಬಗ್ಗೆ ನಮೂದು ಇದ್ದೇಯಾ ಎಂದರೆ ಇಲ್ಲ. ದಾವಾ ಸ್ವತ್ತನ್ನು ಯಾವ ದಿನಾಂಕದಂದು ಅಳತೆ ಮಾಡಿರುತ್ತಾರೆ ಎಂದರೆ ನೆನಪಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ